ಅ) ರಾಜ್ಯದಲ್ಲಿ ಅಸಿಸ್ಟೆಂಟ್ ಚಾರಿಟಿ ಕಮೀಷನರ್ ಹಾಗೂ ಚಾರಿಟಿ ಕಮೀಷನರ್ ಹುದ್ದೆಗಳನ್ನು ತೆಗೆದು ಹಾಕಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದುವರೆವಿಗೂ ಯಾವುದೇ ಪರ್ಯಾಯ ವ್ಯವಸ್ಥೆ ಮಾಡದೇ ಇರುವ ಸಂಗತಿ ನಿಜವೇ?

ಇ) ಹಾಗಿದ್ದಲ್ಲಿ ಇದಕ್ಕೆ ಸಂಬಂಧಿಸಿ ಪರ್ಯಾಯ ವ್ಯವಸ್ಥೆಯನ್ನು ಕೊಡೇ ಮಾಡಲಾಗುವುದೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ದಿ: 01–05–2003 ರಿಂದ ಜಾರಿಗೆ ಬಂದಿರುವುದರಿಂದ ಚಾರಿಟಿ ಕಮೀಷನರ್ ಹಾಗು ಅಇಸ್ಟೆಂಟ್ ಚಾರಿಟಿ ಕಮೀಷನರ್ ಹುದ್ದೆಗಳು ರದ್ದಾಗಿದೆ. ಇದರಿಂದಾಗಿ ಉದ್ಭವಿಸಿರುವ ತೊಂದರೆಗಳನ್ನು ನಿವಾರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಸರ್ಕಾರದ ಅಧಿಸೂಚಿತ ಸಂಸ್ಥೆಗಳ ಆಡಳಿತವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಾರೆ.

ಇ) ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಕ್ರೀಡೆಗಳನ್ನು ಬೆಳೆಸಲು ಪ್ರೋತ್ಸಾಹ

3315 (3746) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕ್ರೀಡಾ ಇಲಾಖೆಯಿಂದ ಕ್ರೀಡೆಗಳನ್ನು ಬೆಳೆಸಲು ಯಾವ ಯಾವ ಪ್ರತ್ಸಾಹಗಳನ್ನು ಕೊಡಲಾಗುತ್ತಿದೆ?

ಆ) ಬೆಳಗಾವಿ ಜಿಲ್ಲೆಯಲ್ಲಿ ಕ್ರೀಡಾ ಇಲಾಖೆಯವರು ಕ್ರೀಡೆಗಳನ್ನು ಬೆಳಸಲು ಯಾವ ಯಾವ ಪರಿಹಾರ ಧನಗಳನ್ನು ಕೊಡುತ್ತಿರುವರು? ಇದಕ್ಕೆ ಎಷ್ಟು ಹಣ ಮಂಜೂರಾಗಿತ್ತು ಮತ್ತು ಎಷ್ಟು ಹಣ ಖರ್ಚಾಗಿರುವುದು (ಪೂರ್ಣ ವಿವರ ನೀಡುವುದು).

ಇ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಕ್ರೀಡೆಗಳನ್ನು ಬೆಳೆಸಲು ಎಷ್ಟು ಹಣ ಖರ್ಚು ಮಾಡಲಾಗಿದೆ?

ಈ) ಬೆಳಗಾವಿ ಜಿಲ್ಲೆಯಲ್ಲಿ ಕ್ರೇಡೆಗಳನ್ನು ಬೆಳೆಸುವ ಸಲುವಾಗಿ ಅನುಭವಿ ಕೋಚ್ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಯಾವ ಯಾವ ಕ್ರೀಡೆಗಳಿಗೆ ಅನುಭವಿ ಕೋಚ್‌ಗಳನ್ನು ಯಾವ ಯಾವ ಷರತ್ತುಗಳ ಮೇಲೆ ನಿಯೋಜಿಸಲಾಗುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) ಕ್ರೀಡೆಗಳನ್ನು ಪ್ರೋತ್ಸಾಹಿಸಲು ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ.

1. ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.

1. ಜಿಲ್ಲಾ ಕ್ರೀಡಾಂಗಣ ನಿರ್ಮಾಣ
2. ತಾಲ್ಲೂಕು ಕ್ರೀಡಾಂಗಣ ನಿರ್ಮಾಣ
3. ಜಿಲ್ಲಾ ಮಟ್ಟದಲ್ಲಿ ನಿರ್ಮಾಣ

4. ಜಿಲ್ಲಾಮಟ್ಟದಲ್ಲಿ ಈಜುಕೊಳಗಳ ನಿರ್ಮಾಣ
5. ಆಟದ ಮೈದಾನಗಳ ಅಭಿವೃದ್ಧಿ
6. ಗ್ರಾಮೀಣ ಗರಡಿಮನೆಗಳ ನಿರ್ಮಾಣ
7. ಕುಸ್ತಿ ಅಖಾಡಗಳ ಅಭಿವೃದ್ಧಿ

2. ಕ್ರೀಡಾಪಟುಗಳ ಕೌಶಲ್ಯ ಕಾರ್ಯಕ್ರಮಗಳು

1. ಕ್ರೀಡಾ ಶಾಲೆ
2. ಕ್ರೀಡಾ ವಸತಿ ನಿಲಯ
3. ಕ್ರೀಡಾ ಪಂದ್ಯಾವಳಿಗಳು
   ಅ. ಮಹಿಳಾ ಕ್ರೀಡೆಗಳು
   ಆ. ಗ್ರಾಮೀಣ ಕ್ರೀಡೆಗಳು
   ಇ. ದಸರಾ ಕ್ರೀಡೆಗಳು.
4. ತರಬೇತಿ
5. ಕ್ರೀಡಾಸಂಸ್ಥೆಗಳಿಗೆ ತರಬೇತಿ ಶಿಬಿರ ನೆಡೆಸಲು
   ಪಂದ್ಯಾವಳಿ ನಡೆಸಲು ಮತ್ತು ಸ್ಪರ್ದೆಗಳಿಗೆ ತಂಡಗಳನ್ನು ಕಳುಹಿಸಲು ಆರ್ಥಿಕ ಸಹಾಯ ನೀಡುವುದು.

3. ಕ್ರೀಡಾಪಟುಗಳ ಕಲ್ಯಾಣ ಕಾರ್ಯಕ್ರಮಗಳು

1. ಏಕಲವ್ಯ ಪ್ರಶಸ್ತಿ
2. ರಾಷ್ಟ್ರ ಹಾಗೂ ಅಂತರ ರಾಷ್ಟ್ರ
   ಮಟ್ಟದ ಸ್ಪರ್ದೆಗಳಲ್ಲಿ ಪದಕ ವಿಜೇತರಿಗೆ ನಗದು ಪುರಸ್ಕಾರ
3. ವೃತ್ತಿಪರ ಕಾಲೇಜುಗಳಲ್ಲಿ ಹಾಗೂ ಪಾಲಿಟೆಕ್ನಿಕ್‌ಗಳಿಗೆ ಪ್ರವೇಶಕ್ಕಾಗಿ
4. ನಿವೇಶನಗಳ ಮಂಜೂರಾತಿ.
5. ಕಷ್ಟ ಪರಿಸ್ಥಿತಿಗಳಲ್ಲಿರುವ ಕ್ರೀಡಾ ಪಟುಗಳಿಗೆ ಮಾಸಾಶನ ನೀಡುವುದು.

ಆ) ಇಲಾಖೆಯ ವತಿಯಿಂದ ಕ್ರೀಡೆಗಳನ್ನು ಬೆಳೆಸಲು ಯಾವುದೇ ಪರಿಹಾರ ಧನವನ್ನು ನೀಡುತ್ತಿಲ್ಲ.

ಇ) ಗ್ರಾಮೀಣ ಕ್ರೀಡಾಕೂಡ, ದಸರಾ ಕ್ರೀಡಾಕೂಟ ಹಾಗೂ ಯುವಜನ ಮೇಳಗಳನ್ನು ನಡೆಸಲು ಒಟ್ಟು 0.18 ಲಕ್ಷ ಹಣ ಖರ್ಚು ಮಾಡಲಾಗಿದೆ.

ಈ) ಬೆಳಗಾಂ ಜಿಲ್ಲೆಯಲ್ಲಿ ಜೂಡೊ, ಈಜು, ವಾಲಿಬಾಲ್, ಅಥ್ಲೆಟಿಕ್, ಬಾಸ್ಕೆಟ್ ಬಾಲ್, ಸೈಕ್ಲಿಂಗ್, ಹಾಕಿ, ಖೋಖೋ, ಅಂಗಸಾಧನೆ ಕ್ರೀಡೆಗಳಲ್ಲಿ ತರಬೇತಿ ನೀಡಲು ಒಟ್ಟು 15 ತರೆಬೇತಿದಾರರನ್ನು ನಿಯುಕ್ತಿಗೊಳಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಕೆಲಸ ತೆಗೆದುಕೊಳ್ಳುವುದು

3316 (3747) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?